KAMD710010462021

# ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣ.

**ಉಪಸ್ಥಿತರು :**

**ಶ್ರೀ ಮಹದೇವಪ್ಪ.ಹೆಚ್. ಬಿ.ಎ.ಎಲ್.ಎಲ್.ಬಿ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.

ದಿನಾಂಕ 24 ನೇ ನವೆಂಬರ್ ಮಾಹೆ 2022

**ಸಿವಿಲ್ ಮಿಸ್ ಸಂಖ್ಯೆ : 12/2021**

ಅರ್ಜಿದಾರರು **:** ಶ್ರೀಮತಿ.ದೇವಮ್ಮ, ಕೋಂ.ಲೇಟ್ ಪುಟ್ಟಸ್ವಾಮಯ್ಯ,
ವಯಸ್ಸು 76 ವರ್ಷ,
ವಾಸ : ಕಿರಂಗೂರು ಗ್ರಾಮ, ಕೆ.ಶೆಟ್ಟಹಳ್ಳಿ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

**(ವಾದಿಯ ಪರ ಶ್ರೀ ಸಿ.ಆರ್.ಎಸ್. ವಕೀಲರು)**

**ವಿರುದ್ಧ**

ಎದುರುದಾರರು **:**

1. ಕೆ.ಎಸ್.ಧನಲಕ್ಷ್ಮಿ, ಕೋಂ ಲೇಟ್.ಮಹದೇವು,
   ವಯಸ್ಸು 40 ವರ್ಷ,

2. ಸುಕನ್ಯಾ, ಬಿನ್.ದೇವಮ್ಮ,
   ವಯಸ್ಸು 48 ವರ್ಷ,

ಇಬ್ಬರ ವಾಸ : ಕಿರಂಗೂರು ಗ್ರಾಮ,
ಕೆ.ಶೆಟ್ಟಹಳ್ಳಿ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

**(1 ನೇ ಪ್ರತಿವಾದಿ ಪರ ಶ್ರೀ ಜಿ.ಎನ್.ಆರ್, ವಕೀಲರು**
**2 ನೇ ಪ್ರತಿವಾದಿ - ಏಕಪಕ್ಷೀಯರಾಗಿರುತ್ತಾರೆ)**

## : ಆದೇಶ :

1 ನೇ ಎದುರುದಾರು, ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 9 ನಿಯಮ 13 ರಡಿಯಲ್ಲಿ ಸಲ್ಲಿಸಿರುವಂತಹ ಈ ಅರ್ಜಿಯ ಸಿಂಧುತ್ವದ ಮೇಲೆ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ರಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಮಾಡಲಾದ ಆದೇಶ.

**2. ಅರ್ಜಿದಾರರ ಅರ್ಜಿಯ ಸಾರಾಂಶ ಈ ಕೆಳಗಿನಂತೆ ಇರುತ್ತದೆ :**

1 ನೇ ಎದುರುದಾರರು, ಅರ್ಜಿದಾರರು ಹಾಗೂ 2 ನೇ ಎದುರುದಾರರ ವಿರುದ್ದ ಓ.ಎಸ್.ನಂ.140/2017 ದಾವೆಯನ್ನು ನಿರ್ದಿಷ್ಟ ಕರಾರು ಪರಿಪಾಲನೆ ಆದೇಶ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ನ್ಯಾಯಾಲಯವು ದಿನಾಂಕ 14.03.2018 ರಂದು ವಾದಿಯ ಪರವಾಗಿ ಡಿಕ್ರಿ ಮಾಡಿರುತ್ತದೆ. ಸದರಿ ದಾವೆಯನ್ನು ವಾದಿಯು ನ್ಯಾಯಾಲಯದ ಮುಂದೆ ಸಲ್ಲಿಸಿದಾಗ ಅರ್ಜಿದಾರರಿಗೆ ಸಮನ್ಸ್ ನೀಡಲಾಗಿ ಸಮನ್ಸ್ ಜಾರಿಯಾದ ನಂತರ ಸದರಿ ಸಮನ್ಸ್ ನ್ನು ಗ್ರಾಮಸ್ಥರಿಗೆ ತೋರಿಸಲಾಗಿ ಗ್ರಾಮಸ್ಥರು ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ತಿಳಿಸಿದ್ದರು. ಅರ್ಜಿದಾರರಿಗೆ ಸುಮಾರು 76 ವರ್ಷ ವಯಸ್ಸಾಗಿದುದ್ದರಿಂದ ಸರಿಯಾಗಿ ಕಿವಿ ಕೇಳುವುದಿಲ್ಲ, ಕಣ್ಣು ಕಾಣುವುದಿಲ್ಲ ಮತ್ತು ಪ್ರಯಾಣ ಮಾಡಲು ಆಗದೆ ಇದ್ದರೂ ಸಹ ಪ್ರಯಾಣಮಾಡಿಕೊಂಡು ಬಂದು ದಿನಾಂಕ 06.01.2018 ರಂದು ಮುದ್ದತ್ತು ಇದ್ದಾಗ ನ್ಯಾಯಾಲಯಕ್ಕೆ ಹಾಜರಾಗಿದ್ದು, ಸದರಿ ನ್ಯಾಯಾಲಯದ ಸಂಕೀರ್ಣದಲ್ಲಿ ಯಾವ ನ್ಯಾಯಾಲಯ ಎಂದು ಗೊತ್ತಾಗದೆ 1 ನೇ ಎದುರುದಾರರನ್ನು ಭೇಟಿ ಮಾಡಿ ಯಾವ ಕಾರಣಕ್ಕಾಗಿ ದಾವೆ ಹೂಡಿರುತ್ತೀರೆಂದು ಅರ್ಜಿದಾರರು ಕೇಳಿದಾಗ 1 ನೇ ಎದುರುದಾರರು ನೀವು ಪಡೆದುಕೊಂಡ ಸಾಲಕ್ಕಾಗಿ ದಾವೆ ಸಲ್ಲಿಸಿದ್ದೇನೆ. ಮರುಪಾವತಿಸಿದ ನಂತರ ದಾವೆಯನ್ನು ಹಿಂಪಡೆಯುತ್ತೇನೆಂದು ತಿಳಿಸಿದ್ದು, ಅದರಂತೆ ಅರ್ಜಿದಾರರು ಕಾಲಾವಾಕಾಶ ಕೇಳಿದ್ದು, ನಂತರ ನ್ಯಾಯಾಲಯದಲ್ಲಿ ಅರ್ಜಿದಾರರು ಹಾಜರಾಗಿರುವುದಿಲ್ಲ ಎಂದು ಏಕಪಕ್ಷೀಯವಾಗಿ ಡಿಕ್ರಿಯಾಗಿರುತ್ತದೆ. ಸದರಿ ವಿಚಾರವು ಈ ಅರ್ಜಿಯನ್ನು ಸಲ್ಲಿಸುವ 15 ದಿನಗಳ ಮುಂಚೆ 1 ನೇ ಎದುರುದಾರರು ಆಸ್ತಿಯು ತನಗೆ ಕ್ರಯವಾಗಿರುವುದಾಗಿ ಗ್ರಾಮದಲ್ಲಿ ಪ್ರಚಾರ ಮಾಡುತ್ತಿದ್ದ ಸಂಗತಿಯು ಗೊತ್ತಾಗಿ ಮೊಮ್ಮಕ್ಕಳ ಸಹಾಯದಿಂದ ವಕೀಲರನ್ನು ಭೇಟಿ ಮಾಡಿ ದಾಖಲೆಗಳನ್ನು ಪಡೆದಾಗ ಏಕಪಕ್ಷೀಯವಾಗಿ ಡಿಕ್ರಿ ಪಡೆದುಕೊಂಡಿರುವುದು ಗೊತ್ತಾಗಿರುತ್ತದೆ. ದಾವಾ ಆಸ್ತಿಯು ಒಟ್ಟುಕುಟುಂಬದ ಆಸ್ತಿಯಾಗಿದ್ದು, ಹೆಚ್ಚಿನ ಮೌಲ್ಯ ಉಳ್ಳದ್ದಾಗಿರುತ್ತದೆ. ಅರ್ಜಿದಾರರಿಗೆ ಸದರಿ ಆಸ್ತಿಯನ್ನು ಹೊರತುಪಡಿಸಿ ಬೇರೆಯಾವುದೇ ಆಸ್ತಿ ಜೀವನ ನಿರ್ವಹಣೆಗೆ ಇರುವುದಿಲ್ಲ. ಅರ್ಜಿದಾರರ ವಯೋವೃದ್ಧರಾಗಿದ್ದು, ಹಿರಿಯ ನಾಗರೀಕರಾಗಿರುತ್ತಾರೆ. ಸದರಿ ಅರ್ಜಿಯನ್ನು

ಪುರಸ್ಕರಿಸಿ, ಅರ್ಜಿದಾರರಿಗೆ ಲಿಖಿತ ತಕರಾರು ಸಲ್ಲಿಸಿ ದಾವೆಯನ್ನು ಮುನ್ನಡೆಸಲು ಅವಕಾಶ ಮಾಡಿಕೊಟ್ಟಲ್ಲಿ ಎದುರುದಾರರಿಗೆ ಯಾವುದೇ ತುಂಬಲಾರದಂತಹ ನಷ್ಟ ಉಂಟಾಗುವುದಿಲ್ಲ. ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಅರ್ಜಿದಾರರು ನ್ಯಾಯಾಲಯದ ಮುಂದೆ ಈ ಅರ್ಜಿಯನ್ನು ಸಲ್ಲಿಸಿದ ನಂತರ ಎದುರುದಾರರಿಗೆ ನೋಟೀಸ್ ನೀಡಲಾಗಿ, 1 ನೇ ಎದುರುದಾರರು ತಮ್ಮ ಪರ ವಕೀಲರ ಮೂಲಕ ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತಾರೆ. 2 ನೇ ಎದುರುದಾರರು ಏಕಪಕ್ಷೀಯರಾಗಿರುತ್ತಾರೆ. 1 ನೇ ಎದುರುದಾರರು ತಮ್ಮ ತಕರಾರಿನಲ್ಲಿ, ಅರ್ಜಿಯ ಸಂಗತಿಗನ್ನು ಅಲ್ಲಗಳೆದು ಮುಂದುವರೆದು, ಅರ್ಜಿದಾರರು ಹಾಗೂ 2 ನೇ ಎದುರುದಾರರು ತಮ್ಮ ಕುಟುಂಬದ ದರದು ನಿಮಿತ್ತವಾಗಿ ಅಂದರೆ ಜಮೀನಿನ ಮೇಲೆ ಮಾಡಿರುವ ಸಾಲ ತೀರುವಳಿ ಹಾಗೂ ಕುಟುಂಬದ ಅಭಿವೃದ್ಧಿಗಾಗಿ ದಾವಾ ಆಸ್ತಿಯನ್ನು ದಿನಾಂಕ 17.11.2012 ರಂದು 1 ನೇ ಎದುರುದಾರರಿಗೆ ರೂ.4,50,000/- ಗಳಿಗೆ ಮಾರಾಟ ಮಾಡಲು ಒಪ್ಪಿ ಅದೇ ದಿನ ಸಾಕ್ಷಿದಾರರ ಸಮಕ್ಷಮ ಅರ್ಜಿದಾರರು ಮತ್ತು 2 ನೇ ಎದುರುದಾರರು 1 ನೇ ಎದುರುದಾರರಿಂದ ರೂ.4,00,000/- ಹಣವನ್ನು ಮುಂಗಡವಾಗಿ ಪಡೆದು ಬಾಕಿ ರೂ.50,000/- ಗಳನ್ನು ಕ್ರಯಪತ್ರ ಮಾಡಿಕೊಡುವ ವೇಳೆ ಪಡೆದುಕೊಳ್ಳುವುದಾಗಿ ಒಪ್ಪಿ ನೋಂದಾಯಿತ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದರು. ನಂತರ ಕರಾರುಪತ್ರದಂತೆ ಅರ್ಜಿದಾರರು ಮತ್ತು 2 ನೇ ಎದುರುದಾರರು ನಡೆದುಕೊಳ್ಳದೆ ಇದುದ್ದರಿಂದ ದಿನಾಂಕ 06.11.2017 ರಂದು ವಕೀಲರ ಮುಖಾಂತರ ನೋಟೀಸ್ ನೀಡಿದ್ದು, ನೋಟೀಸ್ ಜಾರಿಯಾದರೂ ಸಹ ಕ್ರಯಪತ್ರ ಬರೆದುಕೊಡದೆ ಇದುದ್ದರಿಂದ ನ್ಯಾಯಾಲಯದ ಮುಂದೆ ಓ.ಎಸ್.ನಂ.140/2017 ರ ದಾವೆಯನ್ನು ಸಲ್ಲಿಸಲಾಯಿತು. ಸದರಿ ದಾವೆಯಲ್ಲಿ ಸಮನ್ಸ್ ಜಾರಿಯಾದರೂ ಸಹ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದುದರಿಂದ ನ್ಯಾಯಾಲಯವು ಏಕಪಕ್ಷೀಯ ಡಿಕ್ರಿ ನೀಡಿರುತ್ತದೆ. ಸದರಿ ಡಿಕ್ರಿಯ ಮೇಲೆ ಅಮಲು ಜಾರಿ ಸಂಖ್ಯೆ 141/2018 ನ್ನು ಸಲ್ಲಿಸಲಾಗಿ ಸದರಿ ಅಮಲುಜಾರಿ ಅರ್ಜಿಯಲ್ಲಿ ನ್ಯಾಯಾಲಯದಿಂದ ಕೋರ್ಟ್ ಕಮೀಷನರ್ ನೇಮಕವಾಗಿ, ಅವರ ಮುಖಾಂತರ ನೋಂದಾಯಿತ ಕ್ರಯಪತ್ರವನ್ನು ದಿನಾಂಕ 27.07.2021 ರಂದು ಪಡೆದುಕೊಂಡಿರುತ್ತಾರೆ. ಸದರಿ ಕ್ರಯಪತ್ರದಂತೆ ಕಂದಾಯ ದಾಖಲೆಗಳನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡು ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. ಅರ್ಜಿದಾರರು 1 ನೇ ಎದುರುದಾರರಿಗೆ ತೊಂದರೆ ಕೊಡುವ

ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಖರ್ಚು ಸಹಿತ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಈ ಮೇಲೆ ಹೇಳಿದ ಅರ್ಜಿಯ ಸಂಗತಿಗಳು ಮತ್ತು ತಕರಾರಿನ ಸಂಗತಿಗಳ ಮೇರೆಗೆ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

: **ಅಂಶಗಳು** :

1. 1 ನೇ ಎದುರುದಾರರು ಅರ್ಜಿಯನ್ನು ಪುರಸ್ಕರಿಸಲು ಸಕಾರಣಗಳನ್ನು ನೀಡಿರುತ್ತಾರೆಯೇ ?
2. ಏನು ಆದೇಶ ?

5. ಅರ್ಜಿದಾರರು ಈ ಮೇಲಿನ ಅಂಶವನ್ನು ರುಜುವಾತುಪಡಿಸಲು ಸ್ವತಃ ಪಿಡಬ್ಲ್ಯೂ 1 ಎಂದು ವಿಚಾರಣೆಗೆ ಒಳಪಡಿಸಿದ್ದು ನಿಪಿ-1 ದಾಖಲೆಯನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿದ್ದಾರೆ. ಎದುರುದಾರರು ನ್ಯಾಯಾಲಯದ ಮುಂದೆ ಹಾಜರಾಗಿರುತ್ತಾರೆ. ಆದರೆ ವಿಚಾರಣೆಗೆ ಒಳಗಾಗಿರುವುದಿಲ್ಲ.

6. ಅರ್ಜಿದಾರರು ಹಾಗೂ ಎದುರುದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

7. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತವೆ :-

| | | |
|---|---|---|
| ಅಂಶ ನಂ.1 | - | ಸಕಾರಾತ್ಮಕವಾಗಿ |
| ಅಂಶ ನಂ.2 | - | ಮಾಡಲಾದ ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

: **ಕಾರಣಗಳು** :

8. **ಅಂಶ ನಂ.1** : ಅರ್ಜಿದಾರರು ಈ ಅರ್ಜಿಯನ್ನು ಓ.ಎಸ್.ನಂ.140/2017 ದಾವೆಯಲ್ಲಿ ಆದ ಏಕಪಕ್ಷಿಯ ಡಿಕ್ರಿಯನ್ನು ರದ್ದುಗೊಳಿಸಿ ಪುನರ್ ಸ್ಥಾಪಿಸಲು ಕೋರಿ ಸಲ್ಲಿಸಿರುತ್ತಾರೆ. ಸದರಿ 1 ನೇ ಎದುರುದಾರರು ಅರ್ಜಿದಾರರು ಸಲ್ಲಿಸಿರುವ ಈ ಅರ್ಜಿಯು ಕಾನೂನಿನ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ ಎಂದು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151

ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ವಾದ ಮಂಡನೆಯನ್ನು ಮಾಡಿರುತ್ತಾರೆ. ಮತ್ತು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

9. ಅರ್ಜಿದಾರರ ಪರ ವಕೀಲರು ತಮ್ಮ ವಾದ ಮಂಡನೆಯ ಕಾಲಕ್ಕೆ ಅರ್ಜಿದಾರರು ಹಾಗೂ 2 ನೇ ಎದುರುದಾರರ ವಿರುದ್ದ ಓ.ಎಸ್.ನಂ.140/2017 ದಾವೆಯನ್ನು ನಿರ್ದಿಷ್ಟ ಕರಾರು ಪರಿಪಾಲನೆ ಆದೇಶ ಕೋರಿ ದಾವೆಯನ್ನು ಸಲ್ಲಿಸಿದ್ದರು. ಸದರಿ ದಾವೆಯಲ್ಲಿ ನ್ಯಾಯಾಲಯವು ದಿನಾಂಕ 14.03.2018 ರಂದು ವಾದಿಯ ಪರವಾಗಿ ಡಿಕ್ರಿ ಮಾಡಿರುತ್ತದೆ. ಸದರಿ ದಾವೆಯನ್ನು ವಾದಿಯು ನ್ಯಾಯಾಲಯದ ಮುಂದೆ ಸಲ್ಲಿಸಿದಾಗ ಅರ್ಜಿದಾರರಿಗೆ ಸಮನ್ಸ್ ನೀಡಲಾಗಿ ಸಮನ್ಸ್ ಜಾರಿಯಾದ ನಂತರ ಸದರಿ ಸಮನ್ಸ್ ನ್ನು ಗ್ರಾಮಸ್ಥರಿಗೆ ತೋರಿಸಲಾಗಿ ಗ್ರಾಮಸ್ಥರು ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ತಿಳಿಸಿದ್ದರು. ಅರ್ಜಿದಾರರಿಗೆ ಸುಮಾರು 76 ವರ್ಷ ವಯಸ್ಸಾಗಿದುದ್ದರಿಂದ ಸರಿಯಾಗಿ ಕಿವಿ ಕೇಳುವುದಿಲ್ಲ, ಕಣ್ಣು ಕಾಣುವುದಿಲ್ಲ ಮತ್ತು ಪ್ರಯಾಣ ಮಾಡಲು ಆಗದೆ ಇದ್ದರೂ ಸಹ ಪ್ರಯಾಣಮಾಡಿಕೊಂಡು ಬಂದು ದಿನಾಂಕ 06.01.2018 ರಂದು ಮುದ್ದತ್ತು ಇದ್ದಾಗ ನ್ಯಾಯಾಲಯಕ್ಕೆ ಹಾಜರಾಗಿದ್ದು, ಸದರಿ ನ್ಯಾಯಾಲಯದ ಸಂಕೀರ್ಣದಲ್ಲಿ ಯಾವ ನ್ಯಾಯಾಲಯ ಎಂದು ಗೊತ್ತಾಗದೆ 1 ನೇ ಎದುರುದಾರರನ್ನು ಭೇಟಿ ಮಾಡಿ ಯಾವ ಕಾರಣಕ್ಕಾಗಿ ದಾವೆ ಹೂಡಿರುತ್ತೀರೆಂದು ಅರ್ಜಿದಾರರು ಕೇಳಿದಾಗ 1 ನೇ ಎದುರುದಾರರು ನೀವು ಪಡೆದುಕೊಂಡ ಸಾಲಕ್ಕಾಗಿ ದಾವೆ ಸಲ್ಲಿಸಿದ್ದೇನೆ. ಮರುಪಾವತಿಸಿದ ನಂತರ ದಾವೆಯನ್ನು ಹಿಂಪಡೆಯುತ್ತೇನೆಂದು ತಿಳಿಸಿದ್ದು, ಅದರಂತೆ ಅರ್ಜಿದಾರರು ಕಾಲಾವಾಕಾಶ ಕೇಳಿದ್ದು, ನಂತರ ನ್ಯಾಯಾಲಯದಲ್ಲಿ ಅರ್ಜಿದಾರರು ಹಾಜರಾಗಿರುವುದಿಲ್ಲ ಎಂದು ಏಕಪಕ್ಷೀಯವಾಗಿ ಡಿಕ್ರಿಯಾಗಿರುತ್ತದೆ. ಸದರಿ ವಿಚಾರವು ಈ ಅರ್ಜಿಯನ್ನು ಸಲ್ಲಿಸುವ 15 ದಿನಗಳ ಮುಂಚೆ 1 ನೇ ಎದುರುದಾರರು ಆಸ್ತಿಯು ತನಗೆ ಕ್ರಯವಾಗಿರುವುದಾಗಿ ಗ್ರಾಮದಲ್ಲಿ ಪ್ರಚಾರ ಮಾಡುತ್ತಿದ್ದ ಸಂಗತಿಯು ಗೊತ್ತಾಗಿ ಮೊಮ್ಮಕ್ಕಳ ಸಹಾಯದಿಂದ ವಕೀಲರನ್ನು ಭೇಟಿ ಮಾಡಿ ದಾಖಲೆಗಳನ್ನು ಪಡೆದಾಗ ಏಕಪಕ್ಷೀಯವಾಗಿ ಡಿಕ್ರಿ ಪಡೆದುಕೊಂಡಿರುವುದು ಗೊತ್ತಾಗಿರುತ್ತದೆ. ದಾವಾ ಆಸ್ತಿಯು ಒಟ್ಟುಕುಟುಂಬದ ಆಸ್ತಿಯಾಗಿದ್ದು, ಹೆಚ್ಚಿನ ಮೌಲ್ಯ ಉಳ್ಳದ್ದಾಗಿರುತ್ತದೆ. ಅರ್ಜಿದಾರರಿಗೆ ಸದರಿ ಆಸ್ತಿಯನ್ನು ಹೊರತುಪಡಿಸಿ ಬೇರೆಯಾವುದೇ ಆಸ್ತಿ ಜೀವನ ನಿರ್ವಹಣೆಗೆ ಇರುವುದಿಲ್ಲ. ಅರ್ಜಿದಾರರ ವಯೋವೃದ್ಧರಾಗಿದ್ದು, ಹಿರಿಯ ನಾಗರೀಕರಾಗಿರುತ್ತಾರೆ. ಸದರಿ ಅರ್ಜಿಯನ್ನು ಪುರಸ್ಕರಿಸಿ, ಅರ್ಜಿದಾರರಿಗೆ ಲಿಖಿತ ತಕರಾರು ಸಲ್ಲಿಸಿ ದಾವೆಯನ್ನು ಮುನ್ನಡೆಸಲು ಅವಕಾಶ ಮಾಡಿಕೊಟ್ಟಲ್ಲಿ ಎದುರುದಾರರಿಗೆ ಯಾವುದೇ ತುಂಬಲಾರದಂತಹ ನಷ್ಟ ಉಂಟಾಗುವುದಿಲ್ಲ. ಅರ್ಜಿದಾರರು ವಿಚಾರಣೆಗೆ ಒಳಗಾಗಿ ನಿಪಿ.1 ದ ದಾಖಲೆಯನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. 1 ನೇ

ಎದುರುದಾರರು ನ್ಯಾಯಾಲಯದ ಮುಂದೆ ವಿಚಾರಣೆಗೆ ಒಳಗಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1 ನೇ ಎದುರುದಾರ ತಾಂತ್ರಿಕ ಕಾರಣ ಆಧರಿಸಿ ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಎದುರುದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

10. 1 ನೇ ಎದುರುದಾರರ ಪರ ವಕೀಲರು ತಮ್ಮ ವಾದಮಂಡನೆಯ ಕಾಲಕ್ಕೆ ಅರ್ಜಿದಾರರು ಹಾಗೂ 2 ನೇ ಎದುರುದಾರರು ತಮ್ಮ ಕುಟುಂಬದ ದರದು ನಿಮಿತ್ತವಾಗಿ ಅಂದರೆ ಜಮೀನಿನ ಮೇಲೆ ಮಾಡಿರುವ ಸಾಲ ತೀರುವಳಿ ಹಾಗೂ ಕುಟುಂಬದ ಅಭಿವೃದ್ಧಿಗಾಗಿ ದಾವಾ ಆಸ್ತಿಯನ್ನು ದಿನಾಂಕ 17.11.2012 ರಂದು 1 ನೇ ಎದುರುದಾರರಿಗೆ ರೂ.4,50,000/- ಗಳಿಗೆ ಮಾರಾಟ ಮಾಡಲು ಒಪ್ಪಿ ಅದೇ ದಿನ ಸಾಕ್ಷಿದಾರರ ಸಮಕ್ಷಮ ಅರ್ಜಿದಾರರು ಮತ್ತು 2 ನೇ ಎದುರುದಾರರು 1 ನೇ ಎದುರುದಾರರಿಂದ ರೂ.4,00,000/- ಹಣವನ್ನು ಮುಂಗಡವಾಗಿ ಪಡೆದು ಬಾಕಿ ರೂ.50,000/- ಗಳನ್ನು ಕ್ರಯಪತ್ರ ಮಾಡಿಕೊಡುವ ವೇಳೆ ಪಡೆದುಕೊಳ್ಳುವುದಾಗಿ ಒಪ್ಪಿ ನೋಂದಾಯಿತ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದರು. ನಂತರ ಕರಾರುಪತ್ರದಂತೆ ಅರ್ಜಿದಾರರು ಮತ್ತು 2 ನೇ ಎದುರುದಾರರು ನಡೆದುಕೊಳ್ಳದೆ ಇದುದ್ದರಿಂದ ದಿನಾಂಕ 06.11.2017 ರಂದು ವಕೀಲರ ಮುಖಾಂತರ ನೋಟೀಸ್ ನೀಡಿದ್ದು, ನೋಟೀಸ್ ಜಾರಿಯಾದರೂ ಸಹ ಕ್ರಯಪತ್ರ ಬರೆದುಕೊಡದೆ ಇದುದ್ದರಿಂದ ನ್ಯಾಯಾಲಯದ ಮುಂದೆ ಓ.ಎಸ್.ನಂ.140/2017 ರ ದಾವೆಯನ್ನು ಸಲ್ಲಿಸಲಾಯಿತು. ಸದರಿ ದಾವೆಯಲ್ಲಿ ಸಮನ್ಸ್ ಜಾರಿಯಾದರೂ ಸಹ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದುದರಿಂದ ನ್ಯಾಯಾಲಯವು ಏಕಪಕ್ಷೀಯ ಡಿಕ್ರಿ ನೀಡಿರುತ್ತದೆ. ಸದರಿ ಡಿಕ್ರಿಯ ಮೇಲೆ ಅಮಲು ಜಾರಿ ಸಂಖ್ಯೆ 141/2018 ನ್ನು ಸಲ್ಲಿಸಲಾಗಿ ಸದರಿ ಅಮಲುಜಾರಿ ಅರ್ಜಿಯಲ್ಲಿ ನ್ಯಾಯಾಲಯದಿಂದ ಕೋರ್ಟ್ ಕಮೀಷನರ್ ನೇಮಕವಾಗಿ, ಅವರ ಮುಖಾಂತರ ನೋಂದಾಯಿತ ಕ್ರಯಪತ್ರವನ್ನು ದಿನಾಂಕ 27.07.2021 ರಂದು ಪಡೆದುಕೊಂಡಿರುತ್ತಾರೆ. ಸದರಿ ಕ್ರಯಪತ್ರದಂತೆ ಕಂದಾಯ ದಾಖಲೆಗಳನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡು ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. ಅರ್ಜಿದಾರರು 1 ನೇ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಈ ಹಂತದಲ್ಲಿ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

11. ಅರ್ಜಿದಾರರು ನ್ಯಾಯಾಲಯದ ಮುಂದೆ ವಿಚಾರಣೆಗೆ ಒಳಗಾಗಿ ಓ.ಎಸ್.ನಂ.140/2017 ರ ಆದೇಶದ ಪ್ರತಿಯನ್ನು ನಿಪಿ.1 ಎಂದು ಗುರುತಿಸಿಕೊಂಡಿರುತ್ತಾರೆ.

1 ನೇ ಎದುರುದಾರರು ಸಲ್ಲಿಸಿರುವ ನಕಲು ದಾಖಲೆಗಳನ್ನು ಪರಿಶೀಲಿಸಲಾಗಿ 1 ನೇ ಎದುರುದಾರರು ಓ.ಎಸ್.ನಂ140/2017 ದಾವೆಯನ್ನು ಸಲ್ಲಿಸಿದ ನಂತರ ಅರ್ಜಿದಾರರಿಗೆ ಸಮನ್ಸ್ನ ಕಾನೂನುಬದ್ದವಾಗಿ ಜಾರಿಯಾಗಿರುತ್ತದೆ. ನಂತರ ಏಕಪಕ್ಷೀಯವಾಗಿ ಡಿಕ್ರಿ ಆಗಿರುತ್ತದೆ. ಸದರಿ ಡಿಕ್ರಿಯ ಮೇಲೆ 1 ನೇ ಎದುರುದಾರರು ಅರ್ಜಿದಾರರ ವಿರುದ್ದ ಅಮಲುಜಾರಿ ಅರ್ಜಿ ಸಂಖ್ಯೆ.141/2018 ನ್ನು ಸಲ್ಲಿಸಿ ಆ ಅರ್ಜಿಯಲ್ಲಿ ನ್ಯಾಯಾಲಯದಿಂದ ಕೋರ್ಟ್ ಕಮೀಷನರ್ ನೇಮಕವಾಗಿ, ಅವರ ಮುಖಾಂತರ ನೋಂದಾಯಿತ ಕ್ರಯಪತ್ರವನ್ನು ದಿನಾಂಕ 27.07.2021 ರಂದು ಪಡೆದುಕೊಂಡಿರುತ್ತಾರೆ. ಸದರಿ ಕ್ರಯಪತ್ರದಂತೆ ಕಂದಾಯ ದಾಖಲೆಗಳನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡು ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು 1 ನೇ ಎದುರುದಾರರು ನ್ಯಾಯಾಲಯದ ಮುಂದೆ ಸಲ್ಲಿಸಿರುವ ಕ್ರಯಪತ್ರ, ಪಹಣಿಯಿಂದ ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಈಗಾಗಲೇ ನ್ಯಾಯಾಲಯದಿಂದ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆಂದು ವಾದ ಮಂಡನೆಯ ಕಾಲಕ್ಕೆ ತಿಳಿಸಿರುವುದರಿಂದ ಈ ಅರ್ಜಿಯು ಊರ್ಜಿತವಾಗಿರುವುದಿಲ್ಲ.

12. ಅರ್ಜಿದಾರರ ಪರ ವಕೀಲರು ತಮ್ಮ ವಾದ ಮಂಡನೆಯ ಕಾಲಕ್ಕೆ, ಅರ್ಜಿದಾರರು ಸುಮಾರು 76 ವರ್ಷ ವಯಸ್ಸಾಗಿದ್ದು, ಆಕೆಗೆ ಸರಿಯಾಗಿ ಕಣ್ಣು ಕಾಣುವುದಿಲ್ಲ ಮತ್ತು ಕಿವಿ ಸಹ ಕೇಳುವುದಿಲ್ಲ. ಆದರೂ ಸಹ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ನಂತರ ನ್ಯಾಯಾಲಯಕ್ಕೆ ಬಂದಾಗ 1 ನೇ ಎದುರುದಾರರು ಅರ್ಜಿದಾರರಿಗೆ ತಪ್ಪು ತಿಳುವಳಿಕೆಯ ಮಾಹಿತಿಯನ್ನು ನೀಡಿ ಅರ್ಜಿದಾರರ ಓ.ಎಸ್.ನಂ.140/2017 ದಾವೆಯಲ್ಲಿ ಹಾಜರಾಗದಂತೆ ಮಾಡಿ ಏಕಪಕ್ಷೀಯ ಡಿಕ್ರಿ ಪಡೆದುಕೊಂಡಿರುತ್ತಾರೆಂದು ತಿಳಿಸಿದ್ದು, ಈಗಾಗಲೇ ನ್ಯಾಯಾಲಯದಿಂದ ಡಿಕ್ರಿ ಆಧರಿಸಿ 1 ನೇ ಎದುರುದಾರನು ಸಲ್ಲಿಸಿದ ಅಮಲುಜಾರಿ ಅರ್ಜಿಯಲ್ಲಿ ನ್ಯಾಯಾಲಯದಿಂದ ಕೋರ್ಟ್ ಕಮೀಷನರ್ ನೇಮಕವಾಗಿ ಅವರ ಮುಖಾಂತರ ಕ್ರಯಪತ್ರವನ್ನು ಬರೆಸಿಕೊಂಡಿದ್ದು, ಸದರಿ ಕ್ರಯಪತ್ರದಂತೆ 1 ನೇ ಎದುರುದಾರನ ಹೆಸರಿಗೆ ಎಂ.ಆರ್.ಟಿ.ನಂ.318/2021-22 ರಂತೆ ಖಾತೆಯಾಗಿರುವುದರಿಂದ, ಸದರಿ ಕ್ರಯಪತ್ರದಲ್ಲಿ ಈಗಾಗಲೇ ಸ್ವಾಧೀನವನ್ನು ಸಹ ಬಿಡಿಸಿಕೊಡಲಾಗಿರುತ್ತದೆಂದು ನಮೂದು ಇರುವುದರಿಂದ ಅರ್ಜಿದಾರರ ಪರ ವಕೀಲರ ವಾದ ಮಂಡನೆಯನ್ನು ನ್ಯಾಯಾಲಯವು ಪರಿಗಣಿಸಿರುವುದಿಲ್ಲ. 1 ನೇ ಎದುರುದಾರರು ನ್ಯಾಯಾಲಯದ ಮುಂದೆ ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಸಿಂಧುವಾಗಿರುವುದಿಲ್ಲವೆಂದು ರುಜುವಾತುಪಡಿಸಿರುತ್ತಾರೆ. ಆದ್ದರಿಂದ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

13. **ಅಂಶ : 2** **: -** ಅಂಶ 1 ರ ಮೇಲಿನ ಚರ್ಚೆಯಂತೆ ಈ ಕೆಳಗಿನಂತೆ ಆದೇಶಮಾಡಲಾಗುತ್ತಿದೆ :

## ಆದೇಶ

- 1 ನೇ ಎದುರುದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 151 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿ, ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 9 ನಿಯಮ 13 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಲಾಗಿದೆ.

- ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿಸಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 24.11.2022 ರಂದು ಉದ್ಘೋಷಿಸಲಾಯಿತು)

**(ಮಹದೇವಪ್ಪ ಹೆಚ್.)**
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಶ್ರೀರಂಗಪಟ್ಟಣ.

**: ಅನುಭಂಧ :**

**ಅರ್ಜಿದಾರರ ಪರ ಸಾಕ್ಷಿ ನುಡಿದವರ ಪಟ್ಟಿ:**

ಪಿಡಬ್ಲ್ಯೂ.1 : ದೇವಮ್ಮ

**ಅರ್ಜಿದಾರರ ಪರ ಹಾಜರು ಪಡಿಸಿದ ದಾಖಲೆಗಳು : -**

ನಿಪಿ.1 : ಅರ್ಜಿದಾರರ ಆಧಾರ್ ಕಾರ್ಡ್ ನ ದೃಢೀಕೃತ ನಕಲು

**ಎದುರುದಾರರ ಪರ ಸಾಕ್ಷಿ ನುಡಿದವರ ಪಟ್ಟಿ :**

ಇಲ್ಲ

**ಎದುರುದಾರರ ಪರ ಹಾಜರು ಪಡಿಸಿದ ದಾಖಲೆಗಳು :**

ಇಲ್ಲ

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಶ್ರೀರಂಗಪಟ್ಟಣ.**